ಇ) ದಳಪತಿಗಳು ಗೌರವಾರ್ಥದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ, ಇವರುಗಳಿಗೆ ಸರ್ಕಾರದಿಂದ ಪ್ರಸ್ತುತ ಯಾವುದೇ ಸಂಭಾವನೆ ನೀಡುತ್ತಿಲ್ಲ.

ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಸೆಕೆಂಡ್ಸ್ ಮದ್ಯ ಮಾರಾಟ

3004:(4057)

ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಸೆಕೆಂಡ್ಸ್ ಮದ್ಯ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಅದನ್ನು ತಡೆಯಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳಾವುವು?

ಶ್ರೀ ಜಯವಂತ್ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು):

ಅ) ಬಂದಿರುತ್ತದೆ.

ಆ) ಸದರಿ ಮತಕ್ಷೇತ್ರದಲ್ಲಿ ಅಬಕಾರಿ ಸಿಬ್ಬಂದಿಯವರು ದಾಳಿಯನ್ನು ಮಾಡುತ್ತಿದ್ದಾರೆ. ಹಾಗೂ 24 ಮೊಕದ್ದಮೆಗಳನ್ನು ದಾಖಲು ಮಾಡಿ 4011.320 ಲೀಟರ್ ಮದ್ಯವನ್ನು ಜಪ್ತಿ ಮಾಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ತನಿಖೆಯು ಮುಂದುವರೆಯುತ್ತಿದೆ. 5 ಜನರನ್ನು ದಸ್ತಿಗಿರಿ ಮಾಡಲಾಗಿದೆ. ಮತ್ತು ಒಂದು ಲಾರಿಯನ್ನು ಜಪ್ತಿ ಮಾಡಲಾಗಿದೆ.

ಗುಳೇದಗುಡ್ಡ ಮತಕ್ಷೇತ್ರದ ಅಸಂಗಿ ಗ್ರಾಮದ ಬಳಿ ಬ್ಯಾರೇಜ್ ನಿರ್ಮಾಣ

3005:(4056)

ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದ ಅಸಂಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?